ಮೈಸೂರ ಗೆಜಿಟ್.

ಸಂ. XXXVIII] ಸರ್ಕಾರದಿಂದ ಪ್ರಾಮುಖ್ಯವುಳ್ಳದ್ದು. [ನಂ. 43.

ಬೆಂಗಳೂರು, ಗುರುವಾರ, ನವೆಂಬರ್ ತಾ|| 5, ಸನ 1903.

IIನೆ ಭಾಗ.

ಇಂಡ್ಯುಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್‌ಗಳು ಮುಂತಾದವರ ಕಡೆಯಿಂದ ಕೊಡಿಸೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು 417, ತಾರೀಖು 27ನೆ ಅಕ್ಟೋಬರ್ 1903.

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ಪ್ರಕಟಿಸಲ್ಪಡುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟ್ಟು ದಾವಣಗೇರಿ ತಾಲ್ಲೂಕಿನ 255 ಸರಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಜಮಾಬಂದಿಯಾನೆ ತಿದ್ದುಪಡಿಯಾದ ಸರ್ವೆ ಆಕಾರವು ಗವರ್ನ್‌ಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟಿರುವದ್ದರಿಂದ ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಮೇರಿಗೆ ಅದನ್ನು ಬಹಿರಂಗವಾಗಿ ಘೋಷಿಸ್ಮಾಡಲ್ಪಡುವ ಕೆಲಸವೂ ಸನ 1903ನೆ ಇಸವಿ ನವೆಂಬರು 25ನೆ ತಾರೀಖಿನಲ್ಲಿ ಅಥವಾ ಆ ಸುಮಾರಿನಲ್ಲಿ ದಾವಣಗೇರೆಯಲ್ಲಿ ಪ್ರಾರಂಭಿಸಲ್ಪಡುವದು.

ನಂ. 440—ತಾರೀಖು 5ನೆ ನವೆಂಬರ್ 1903ನೆ ಇಸವಿ.

ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಕೇರಿದ ಹಾಲ ಹಿರಿಯೂರು ತಾಲ್ಲೂಕಿನಲ್ಲಿರುವ 149 ಮತ್ತು ಹೊಸದಾಗಿ ಫಿರ್ಕಾಟಾದ ಹೊಸದುರ್ಗ ತಾಲ್ಲೂಕಿನ ಬಾಬತು 55 ಜುಮ್ಲಾ 204 ಸರಕಾರಿ ಗ್ರಾಮಗಳಲ್ಲಿ ರಿವಿಜ್ಯಾನೆ ತಿದ್ದುಪಡಿಯಾದ ಆಕಾರವನ್ನು ಗವರ್ನ್‌ಮೆಂಟಿನವರು ಮಂಜೂರು ಮಾಡಿರುವದ್ದರಿಂದ ಲ್ಯಾಂಡ್ ರೆವಿನ್ಯೂ ಕೋಡ್ 113ನೆ ಸೆಕ್ಷನ್ ಪ್ರಕಾರ ಅದನ್ನು ಘೋಷಿಸ್ಮಾಡತಕ್ಕ ರಿವಿಜ್ಡ್ ಸೆಟ್ಲ್‌ಮೆಂಟ್ ಕೆಲಸವು ಹಿರಿಯೂರ ಮೊಕ್ಕಾಮಿನಲ್ಲಿ 1903ನೆ ಇಸವಿ ಡಿಸೆಂಬರು ತಾರೀಖು 8ರಲ್ಲು ಅಥವಾ ಆ ಸುಮಾರಿಗೆ ಪ್ರಾರಂಭಿಸಲ್ಪಡುವದೆಂದು ಸಕಲ ಜನಗಳಿಗೂ ತಿಳಿಯಪಡಿಸುವದಕ್ಕೋಸ್ಕರ ಈ ಮೂಲಕ ಪ್ರಸಿದ್ಧಪಡಿಸಿ ಇಹೆ.

ಜೆ. ಪಿ. ಗ್ಯಾಂಟ್,

ಸರ್ವೆ ಮತ್ತು ಸೆಟ್ಲಮೆಂಟ್ ಕಮಿಷನರ್, ಮೈಸೂರ್.

ಫಾರೆಸ್ಟ್ ಇಲಾಖೆ.

ನೋಟಿಸು.

1903ನೆ ಇಸವಿ ಆಗಷ್ಟು ತಿಂಗಳು 27ನೆ ತಾರೀಖಿನ IIನೆ ಭಾಗದ 467ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಪಸಾರೆ ಜೆನಸಿ ಜಮಾವಣಿ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಘೋಷಿಸಿರುವದು ಸರಿಯಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜೆನಸಿ ಜಮಾವಣಿ ಹಕ್ಕನ್ನು 1903ನೆ ಇಸವಿ ನವೆಂಬರು 17ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್‌ರವರ ಮತ್ತು ರೇಂಜಾಫೀಸರವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಯಲ್ಲರಿಗೂ ತಿಳಿಸಲ್ಪಟ್ಟಿದೆ.

ಸಿ. ಅಪ್ಪಯ್ಯ,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ತಾರೀಖು 9ನೆ ಅಕ್ಟೋಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ: ಹಾಲಿ ಕೆಲಸದಿಂದ ನಿವೃತ್ತಿ ಮಾಡಲ್ಪಟ್ಟಿರುವ ಫಾರೆಸ್ಟ್ ಗಾರ್ಡು ಭೀಮಯ್ಯ ಎಂಬವನಿಗೆ ಸಲ್ಲಬೇಕಾದ 1901ನೆ ಇಸವಿ ಮೇ, ಜುಲೈ ಮತ್ತು ಆಗಸ್ಟು ಮಾಹಿಗಳ ಭತ್ಯಾ ಮೊಬಲಗು ರೂ. 5—2—6 ಹೊಳಲ್ಕೆರೆ ಫಾರೆಸ್ಟು ರೇಂಜು ಆಫೀಸಿನಲ್ಲಿರುತ್ತದೆ. ಸದರಿ ಭೀಮಯ್ಯನಾಗಲಿ ಅಥವಾ ಅವನ ನ್ಯಾಯವಾದ ಹಕ್ಕುದಾರನಾಗಲಿ ಈ ತಾರೀಖು ಲಾಗಾಯಿತು ಎರಡು ತಿಂಗಳೊಳಗಾಗಿ ಹೊಳಲ್ಕೆರೆ ಫಾರೆಸ್ಟು ರೇಂಜು ಆಫಿಸರವರಲ್ಲಿ ಹಾಜರಾಗಿ ಅವರಿಂದ ಮೇಲ್ಕಂಡ ರೂ. 5—2—6ನ್ನು ತಗದುಕೊಳ್ಳಲು ತಪ್ಪಿದಲ್ಲಿ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಗುತ್ತೆ.